ಅ) & ಆ) ಶಾಸಕರ ನೇತೃತ್ವದ 'ಕಾರ್ಯಪಡೆ' ಯನ್ನು ತುರ್ತು ಕುಡಿಯುವ ನೀರಿನ (ಸಣ್ಣ ಪ್ರಮಾಣದ ಕಾಮಗಾರಿಗಳು) ಯೋಜನೆಗಳ ಅನುಷ್ಠಾನ ಮೂಲಕ ತಾತ್ಕಾಲಿಕ ಪರಿಹಾರ ಸಲುವಾಗಿ ರಚಿಸಲಾಗಿದೆ. ಸಾಕಷ್ಟು ಪ್ರಮಾಣದಲ್ಲಿ ಸುರಕ್ಷಿತ ಕುಡಿಯುವ ನೀರಿನ ಸಮರ್ಪಕ ವ್ಯವಸ್ಥೆ ಕಲ್ಪಿಸಲು ಆರ್ಥಿಕ ಹಾಗೂ ತಾಂತ್ರಿಕ ಕಾರ್ಯಸಿಂಧುತ್ವವಿರುವ ಶಾಶ್ವತ ಯೋಜನೆಗಳನ್ನು ರೂಪಿಸಲು ಇಲಾಖೆಯ ಇಂಜಿನಿಯರಿಂಗ್ ವಿಭಾಗಗಳು ಕ್ರಮಬಹಿಸುತ್ತವೆ ಇಂತಹ ಯೋಜನೆಗಳಿಗೆ ಅಗತ್ಯವಿರುವ ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆ ನೀಡಲು ಅನುದಾನ ಲಭ್ಯತೆ ಆಧರಿಸಿ ಸರ್ಕಾರವು ಚಾಲ್ತಿ ಮಾರ್ಗದರ್ಶಿಗಳನ್ವಯ ಕ್ರಮವಹಿಸುತ್ತದೆ.

ಮಹಿಳಾ ಕಾಲೇಜಿಗೆ ಕಟ್ಟಡದ ಅಭಾವ

37(275) ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್:(ಜಮಖಂಡಿ)ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ಮಹಿಳಾ ಕಾಲೇಜಿನಲ್ಲಿರುವ ವರ್ಗಗಳ ಎಷ್ಟು; ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು;?

ಆ) ಕಾಲೇಜಿನಲ್ಲಿ ಎಷ್ಟು ಸರ್ಕಾರ ಕೋಣೆಗಳ ಮತ್ತು ಶಿಕ್ಷಕರ ಅಭಾವವಿದೆ?

ಇ) ಈ ಸಮಸ್ಯೆಗಳಿಗೆ ಸರ್ಕಾರ ಪರಿಹಾರ ನೀಡಲು ಕೈ ಗೊಂಡ ಕ್ರಮಗಳೇನು?

ಈ) ಹಾಗಿದ್ದಲ್ಲಿ ಎಂದಿನಿಂದ ಕಟ್ಟಡ ಕಾಮಗಾರಿ ಪ್ರಾರಂಭಿಸಲಾಗುವುದು?

ಶ್ರೀ ಅರವಿಂದ ಲಿಂಬಾವಳಿ(ಉನ್ನತ ಶಿಕ್ಷಣ ಸಚಿವರು):

ಅ) ಜಮಖಂಡಿ ಮಹಿಳಾ ಕಾಲೇಜಿನಲ್ಲಿ 06 ಕೋರ್ಸ್‌ಗಳು ಇರತ್ತವೆ. (ಬಿ.ಎ/ಬಿ.ಎಸ್.ಸಿ/ಬಿಕಾಂ/ಬಿ.ಬಿ.ಎ/ ಬಿ.ಎಸ್.ಡಬ್ಲ್ಯೂ/). ಒಟ್ಟಾರೆ 714 ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿರುತ್ತಾರೆ.

ಆ) ಕಾಲೇಜಿನ್ಲಲಿ 15 ಕೊಠಡಿಗಳ ಅಭಾವವಿರುತ್ತದೆ. ಶಿಕ್ಷಕರ ಅಭಾವವಿರುವುದಿಲ್ಲ.

ಇ) ಸದರಿ ಕಾಲೇಜಿಗೆ ಹಾಲಿ 8 ಕೊಠಡಿಗಳಿದ್ದು, ಆ ಕೊಠಡಿಗಳಲ್ಲಿ ತರಗತಿಗಳನ್ನು ನಡೆಸಲಾಗುತ್ತಿದೆ. ಕೊಠಡಿಗಳ ಕೋರತೆ ನೀಗಿಸಲು ಅನುದಾನದ ಲಭ್ಯತೆಯನ್ನು ಆಧರಿಸಿ ಕಟ್ಟಡ ನಿರ್ಮಾಣ ಮಾಡಲು ಕ್ರಮ ವಹಿಸಲಾಗುವುದು.

ಈ) ಅನುದಾನವನ್ನು ಒದಗಿಸಿದ ನಂತರ ಕಟ್ಟಡ ನಿರ್ಮಾಣ ಮಾಡಲು ಪ್ರಾರಂಭಿಸಲಾಗುವುದು.

ನೈರ್ಮಲ್ಯ ಯೋಜನೆ ಅನುಷ್ಠಾನ

38(114) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ:(ಭಾಲ್ಕಿ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಹಾಗೂ ರಾಜ್ಯ ಸರ್ಕಾರ ಮತ್ತು ಫಲಾನುಭವಿಗಳ ಹಣದಿಂದ ಕಾರ್ಯಗತವಾಗುವ ಸೆಂಟ್ರಲ್ ಟೋಟಲ್ ಸ್ಯಾನಿಟೇಶನ್ ಕ್ಯಾಂಪೇನ್ ಯೋಜನೆಯಡಿ ಬೀದರ್ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಯಾವ ಯಾವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ?

ಆ) ಈ ಯೋಜನೆಯ ಅನುಷ್ಠಾನಕ್ಕೆ ಕೇಂದ್ರ, ರಾಜ್ಯ ಮತ್ತು ಫಲಾನುಭವಿಗಳು ಶೇಕಡ ಎಷ್ಟರ ಅನುಪಾತದಲ್ಲಿ ಹಣವನ್ನು ಭರಿಸಬೇಕಾಗಿದೆ?

ಇ) ಈ ಕಾರ್ಯಕ್ರಮದನ್ವಯ ಬೀದರ್ ಜಿಲ್ಲೆಯ ಯಾವ ಯಾವ ಗ್ರಾಮಗಳಲ್ಲಿ ಸಂಪೂರ್ಣ ನೈರ್ಮಲ್ಯ ಯೋಜನೆಯನ್ನು ಅನುಷ್ಠಾನಗೊಳಿಸಲಿದೆ?

ಈ) ಜಿಲ್ಲೆಯ ಯಾವ ಯಾವ ಗ್ರಾಮಗಳಲ್ಲಿ ಈ ಯೋಜನೆ ಯಶಸ್ವಿಯಾಗಿದೆ; ಇದಕ್ಕೆ ವೆಚ್ಚ ಮಾಡಲಾದ ಹಣವೆಷ್ಟು?

ಉ) ಇದರಲ್ಲಿ ಕೇಂದ್ರ ರಾಜ್ಯ ಸರ್ಕಾರ ಮತ್ತು ಫಲಾನುಭವಿಗಳ ಪಾಲೆಷ್ಟು (ಗ್ರಾಮವಾರು ವಿವರಗಳನ್ನು ಒದಗಿಸುವುದು)?

ಊ) ಈ ಯೋಜನೆ ಬೀದರ್ ಜಿಲ್ಲೆಯಲ್ಲಿ ಪೂರ್ಣವಾಗಿ ಅನುಷ್ಠಾನಗೊಳ್ಳದೆ/ಯಶಸ್ವಿಯಗದೇ ಇದ್ದಲ್ಲಿ ಇದಕ್ಕೆ ಕಾರಣಗಳೇನು?

ಋ) ಇದಕ್ಕೆ ಕಾರಣಕರ್ತರಾದವರ ವಿರುದ್ಧ ಕೈಗೊಳ್ಳುವ ಕ್ರಮಗಳೇನು?